**C**

**CCE PR**
**REVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2019**

**S.S.L.C. EXAMINATION, JUNE, 2019**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 26. 06. 2019 ] ಸಂಕೇತ ಸಂಖ್ಯೆ : **85-K**

Date : 26. 06. 2019 ] **CODE NO. : 85-K**

## ವಿಷಯ : ಸಮಾಜ ವಿಜ್ಞಾನ

## Subject : SOCIAL SCIENCE

**(ಕನ್ನಡ ಭಾಷಾಂತರ / Kannada Version)**

**(ಹೊಸ ಪಠ್ಯಕ್ರಮ / New Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** $10 \times 1 = 10$ | |
| 1. | ಯುರೋಪಿನ ದೇಶಗಳ ವ್ಯಾಪಾರದ ಮೇಲೆ ಏಕಸ್ವಾಮ್ಯ ಸಾಧಿಸಿದ ವರ್ತಕರು<br>(A) ಇಟಲಿಯ ವರ್ತಕರು<br>(B) ಅರಬ್ ವರ್ತಕರು<br>(C) ಫ್ರೆಂಚ್ ವರ್ತಕರು<br>(D) ಭಾರತೀಯ ವರ್ತಕರು<br>***ಉತ್ತರ :*** (A) ಇಟಲಿಯ ವರ್ತಕರು | 1 |
| 2. | 'ದತ್ತು ಮಕ್ಕಳಿಗೆ ಹಕ್ಕಿಲ್ಲ' ನೀತಿಯನ್ನು ಜಾರಿಗೆ ತಂದ ಗವರ್ನರ್ ಜನರಲ್<br>(A) ಲಾರ್ಡ್ ವೆಲ್ಲೆಸ್ಲಿ (B) ಲಾರ್ಡ್ ಕಾರನ್‌ವಾಲಿಸ್<br>(C) ಲಾರ್ಡ್ ಡಾಲ್‌ಹೌಸಿ (D) ಲಾರ್ಡ್ ವಿಲಿಯಂ ಬೆಂಟಿಂಕ್<br>***ಉತ್ತರ :*** (C) ಲಾರ್ಡ್ ಡಾಲ್‌ಹೌಸಿ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 3. | ಶೀತಲ ಸಮರ ಜರುಗಿದ ಎರಡು ರಾಷ್ಟ್ರಗಳ ಸರಿಯಾದ ಗುಂಪು<br>(A) ಅಮೆರಿಕಾ ಸಂಯುಕ್ತ ಸಂಸ್ಥಾನಗಳು –ಚೀನಾ<br>(B) ಚೀನಾ – ಸೋವಿಯತ್ ರಷ್ಯಾ<br>(C) ಅಮೆರಿಕಾ ಸಂಯುಕ್ತ ಸಂಸ್ಥಾನಗಳು – ಜಪಾನ್<br>(D) ಅಮೆರಿಕಾ ಸಂಯುಕ್ತ ಸಂಸ್ಥಾನಗಳು – ಸೋವಿಯತ್ ರಷ್ಯಾ<br>***ಉತ್ತರ :*** (D) ಅಮೆರಿಕಾ ಸಂಯುಕ್ತ ಸಂಸ್ಥಾನಗಳು – ಸೋವಿಯತ್ ರಷ್ಯಾ | 1 |
| 4. | ತಾಷ್ಕೆಂಟಿನಲ್ಲಿ ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಒಪ್ಪಂದವಾದದ್ದು<br>(A) 1962 ರಲ್ಲಿ (B) 1963 ರಲ್ಲಿ<br>(C) 1965 ರಲ್ಲಿ (D) 1966 ರಲ್ಲಿ<br>***ಉತ್ತರ :*** (D) 1966 ರಲ್ಲಿ | 1 |
| 5. | ಅಸಂಘಟಿತ ವಲಯದ ಒಂದು ಲಕ್ಷಣ<br>(A) ದುಡಿಮೆ (B) ವಲಸೆ<br>(C) ಕೂಲಿ (D) ಕೂಲಿ ರಹಿತ ದುಡಿಮೆ<br>***ಉತ್ತರ :*** (B) ವಲಸೆ | 1 |
| 6. | ಭಾರತದ ಅತ್ಯಂತ ಎತ್ತರವಾದ ಶಿಖರ<br>(A) ಹಿಮಾಲಯ (B) ಗೌರಿಶಂಕರ<br>(C) ಮೌಂಟ್ ಎವರೆಸ್ಟ್ (D) ಗಾಡ್ವಿನ್–ಆಸ್ಟಿನ್ / Mt. K2<br>***ಉತ್ತರ :*** (D) ಗಾಡ್ವಿನ್–ಆಸ್ಟಿನ್ / Mt. K2 | 1 |
| 7. | ಈ ಕೆಳಗಿನವುಗಳಲ್ಲಿ ಒಂದು ಬಿಳಿಲುಗಳು ಬೆಳೆಯುವ ಕಾಡುಗಳಾಗಿವೆ<br>(A) ನಿತ್ಯಹರಿದ್ವರ್ಣ ಕಾಡುಗಳು<br>(B) ಮಾನ್ಸೂನ್ ಕಾಡುಗಳು<br>(C) ಮ್ಯಾಂಗ್ರೂವ್ ಕಾಡುಗಳು<br>(D) ಪರ್ವತ ಕಾಡುಗಳು<br>***ಉತ್ತರ :*** (C) ಮ್ಯಾಂಗ್ರೂವ್ ಕಾಡುಗಳು | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ಒಂದು ವರ್ಷದ ಅವಧಿಯಲಿ ದೇಶವು ಉತ್ಪಾದಿಸಿದ ಎಲ್ಲಾ ಸರಕು ಸೇವೆಗಳ ಒಟ್ಟು ಮೌಲ್ಯವು<br>(A) ರಾಜ್ಯದ ವರಮಾನ<br>(B) ರಾಷ್ಟ್ರೀಯ ವರಮಾನ<br>(C) ರಾಜ್ಯ ಮತ್ತು ರಾಷ್ಟ್ರದ ವರಮಾನ<br>(D) ತಲಾ ವರಮಾನ<br>***ಉತ್ತರ :*** (B) ರಾಷ್ಟ್ರೀಯ ವರಮಾನ | 1 |
| 9. | ಟೆಲಿ ಶಾಪಿಂಗ್ ಎಂದರೆ<br>(A) ಮನೆಯಲ್ಲಿಯೇ ಕುಳಿತು ವ್ಯಾಪಾರ ಮಾಡುವುದು<br>(B) ವಿದೇಶಿ ಮಟ್ಟದಲ್ಲಿ ವ್ಯಾಪಾರ ಮಾಡುವುದು<br>(C) ಆಂತರಿಕ ವ್ಯಾಪಾರ ಮಾಡುವುದು<br>(D) ಚಿಲ್ಲರೆ ವ್ಯಾಪಾರ ಮಾಡುವುದು<br>***ಉತ್ತರ :*** (A) ಮನೆಯಲ್ಲಿಯೇ ಕುಳಿತು ವ್ಯಾಪಾರ ಮಾಡುವುದು | 1 |
| 10. | ಆಹಾರ ಮತ್ತು ಕೃಷಿ ಸಂಸ್ಥೆಯ ಪ್ರಧಾನ ಕಚೇರಿ ಇರುವ ಸ್ಥಳ<br>(A) ರೋಮ್<br>(B) ಹೊಸ ದಿಲ್ಲಿ<br>(C) ನ್ಯೂಯಾರ್ಕ್<br>(D) ಜಿನೇವಾ<br>***ಉತ್ತರ :*** (A) ರೋಮ್ | 1 |
| II. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವುದು :** 14 × 1 = 14 | |
| 11. | ಬ್ರಿಟಿಷರು ಭಾರತದಲ್ಲಿ ತಮ್ಮ ಹಿತಾಸಕ್ತಿಗಾಗಿ ರಾಜಕೀಯ ಪರಮಾಧಿಕಾರವನ್ನು ಹೇಗೆ ಸ್ಥಾಪಿಸಿದರು ?<br>***ಉತ್ತರ :***<br>ದ್ವಿಪ್ರಭುತ್ವ ಪದ್ಧತಿ ಜಾರಿಗೆ ತರುವ ಮೂಲಕ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 12. | ಬಂಗಾಳದ ವಿಭಜನೆಗೆ ಕಾರಣವೇನು?<br>**ಉತ್ತರ :**<br>ಸ್ವಾತಂತ್ರ್ಯ ಹೋರಾಟದ ತೀವ್ರತೆಯನ್ನು ಕಡಿಮೆ ಮಾಡಲು. | 1 |
| 13. | ಸಂಪತ್ತಿನ ಸೋರಿಕೆಯ ಸಿದ್ಧಾಂತ ಪ್ರತಿಪಾದಕರು ಯಾರು ?<br>**ಉತ್ತರ :**<br>ದಾದಾಭಾಯಿ ನವರೋಜಿ | 1 |
| 14. | ಬ್ರಿಟಿಷರಲ್ಲಿ ಟಿಪ್ಪುವಿನ ವಿರುದ್ಧ ದ್ವೇಷ ಭಾವನೆ ಬೆಳೆಯಲು ಕಾರಣವೇನು ?<br>**ಉತ್ತರ :**<br>ಬ್ರಿಟಿಷರ ವ್ಯಾಪಾರದ ಏಕಸ್ವಾಮ್ಯ ಮುರಿಯಲು ಮುಂದಾದ ಕಾರಣ. | 1 |
| 15. | ಹಲಗಲಿಯ ಬೇಡರು ಬ್ರಿಟಿಷರ ವಿರುದ್ಧ ಏಕೆ ಹೋರಾಟ ನಡೆಸಿದರು ?<br>**ಉತ್ತರ :**<br>ಶಸ್ತ್ರಾಸ್ತ್ರಗಳ ನಿರ್ಭಂಧ ಕಾನೂನಿನ ವಿರುದ್ಧ. | 1 |
| 16. | ಭಾರತ ಮತ್ತು ಪಾಕಿಸ್ತಾನಗಳು ನಿರಂತರ ಘರ್ಷಣೆಯಿಂದಿರಲು ಕಾರಣವೇನು ?<br>**ಉತ್ತರ :**<br>ಕಾಶ್ಮೀರ ಸಮಸ್ಯೆ | 1 |
| 17. | ಮೌನ ಕಣಿವೆ ಆಂದೋಲನವು ಎಲ್ಲಿ ಜರುಗಿತು ?<br>**ಉತ್ತರ :**<br>ಕೇರಳದ ಫಾಲ್ಘಾಟ್ | 1 |
| 18. | ಕೆಂಪು ಮಣ್ಣು ಹೇಗೆ ರಚನೆಗೊಂಡಿದೆ ?<br>**ಉತ್ತರ :**<br>ಸ್ಫಟಿಕ ನೀಸ್ ಗ್ರಾನೈಟ್ ಶಿಲೆಗಳ ಶಿಥಿಲೀಕರಣ | 1 |
| 19. | ಶ್ರೀಗಂಧದ ಮರ ಬೆಳೆಯುವ ಕಾಡು ಯಾವುದು ?<br>**ಉತ್ತರ :**<br>ಉಷ್ಣವಲಯದ ಎಲೆ ಉದುರುವ ಕಾಡುಗಳು | 1 |
| 20. | ಮ್ಯಾಂಗನೀಸನ್ನು ಮಿಶ್ರಲೋಹ ಖನಿಜವೆಂದೇಕೆ ಕರೆಯುವರು ?<br>**ಉತ್ತರ :**<br>ಕಬ್ಬಿಣ ಮತ್ತು ಉಕ್ಕು ತಯಾರಿಕೆಗಾಗಿ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | ಕೇಂದ್ರ ಸರ್ಕಾರವು ಸರಕು ಮತ್ತು ಸೇವಾ ತೆರಿಗೆಯನ್ನು ಏಕೆ ಜಾರಿಗೆ ತಂದಿದೆ ? | |
| | ***ಉತ್ತರ :*** | |
| | ಪರೋಕ್ಷ ತೆರಿಗೆಗಳ ಬದಲಾಗಿ | 1 |
| 22. | ಪ್ರಸ್ತುತ ದಿನಗಳಲ್ಲಿ ಗ್ರಾಹಕರ ರಕ್ಷಣೆ ಏಕೆ ಅಗತ್ಯವಾಗಿದೆ ? | |
| | ***ಉತ್ತರ :*** | |
| | ಶೋಷಣೆಯಿಂದ ಮುಕ್ತಗೊಳಿಸಲು | 1 |
| 23. | ಜನಮಂದೆ ಎಂದರೇನು ? | |
| | ***ಉತ್ತರ :*** | |
| | ಯಾವುದೇ ಪೂರ್ವಯೋಜನೆಯಿಲ್ಲದೇ ಅನಿಶ್ಚಿತವಾಗಿ ಒಂದು ಆಸಕಿಯ ಸುತ್ತ ನೆರೆದಿರುವ ಜನರಾಶಿ. | 1 |
| 24. | ನಿತ್ಯಹರಿದ್ವರ್ಣ ಕಾಡುಗಳು ಸದಾ ಹಸಿರಾಗಿರಲು ಕಾರಣವೇನು ? | |
| | ***ಉತ್ತರ :*** | |
| | 250 ಸೆಂ.ಮೀ. ವಾರ್ಷಿಕ ಮಳೆ ಪಡೆಯುವುದು. | 1 |
| III. | **ಎರಡು ವಾಕ್ಯಗಳಲ್ಲಿ ಉತ್ತರಿಸುವುದು :** $25 \times 2 = 50$ | |
| 25. | ವೆಲ್ಲೆಸ್ಲಿ ಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣೆಯು ಹೇಗಾಯಿತು ? | |
| | ***ಅಥವಾ*** | |
| | ಆಂಗ್ಲೋ ಸಿಖ್ ಯುದ್ಧಗಳ ಪರಿಣಾಮಗಳೇನು ? | |
| | ***ಉತ್ತರ :*** | |
| | * ಮರಾಠ, ಮೈಸೂರು ರಾಜ್ಯಗಳು ದುರ್ಬಲಗೊಂಡಿದ್ದವು | |
| | * ಸಹಾಯಕ ಸೇನಾ ಪದ್ಧತಿ | |
| | * ಹೊಸ ರಾಜ್ಯಗಳ ಮೇಲೆ ಯುದ್ಧ | |
| | * ರಾಜ್ಯಗಳ ಅಧೀನ, ನಿಯಂತ್ರಣ $4 \times \frac{1}{2}$ | 2 |
| | ***ಅಥವಾ*** | |
| | * ಲಾಹೋರ್ ಒಪ್ಪಂದ | |
| | * ಪಂಜಾಬ್‌ನಲ್ಲಿ ರೆಸಿಡೆಂಟಿನ ಮೂಲಕ ಆಡಳಿತ ನಿಯಂತ್ರಣ | |
| | * ಪಂಜಾಬ್ ಬ್ರಿಟಿಷ್ ಸಾಮ್ರಾಜ್ಯದಲ್ಲಿ ವಿಲೀನ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 26. | ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕರಾಗಿದ್ದರು. ಹೇಗೆ ?<br>***ಉತ್ತರ :***<br>∗ ಜನರನ್ನು ವಿದ್ಯಾವಂತರನ್ನಾಗಿಸಿದರೆ ಅವರೇ ಸುಧಾರಣೆ ಬಯಸುವರು.<br>∗ ಶಾಸನ ರೂಪಿಸುವ ಸಂಸ್ಥೆಗಳು ರಚನೆಯಾಗಬೇಕು.<br>∗ ಕತ್ತಲೆಯಲ್ಲಿರುವವರಿಗೆ ಬೆಳಕು ನೀಡುವುದು.<br>∗ ಜಾತಿಯತೆ, ಅಸ್ಪೃಶ್ಯತೆಗೆ ವಿರೋಧ.<br>∗ ಭಾಷಣಗಳು ರಾಷ್ಟ್ರೀಯತೆಯ ಆಲೋಚನೆಗೆ ಹಿಡಿದ ಕೈಗನ್ನಡಿ.<br>(ಯಾವುದಾದರೂ ನಾಲ್ಕು ಅಂಶಗಳು) 4 × ½ | 2 |
| 27. | 1857 ರ ದಂಗೆಗೆ ರಾಜಕೀಯ ಅಂಶಗಳು ಹೇಗೆ ಪ್ರೇರಕವಾದವು ?<br>***ಉತ್ತರ :***<br>∗ ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಿಂದ ದೇಶೀಯ ರಾಜರು ತಮ್ಮ ರಾಜ್ಯಗಳನ್ನು ಕಳೆದುಕೊಂಡರು<br>∗ ನವಾಬರ ರಾಜ ಪದವಿಗಳು ರದ್ದು<br>∗ ಚಕ್ರವರ್ತಿ ಅಧಿಕಾರದಿಂದ ಪದಚ್ಯುತಿ<br>∗ ಸೈನಿಕರು ನಿರುದ್ಯೋಗಿಗಳಾದುದು<br>(ಯಾವುದಾದರೂ ನಾಲ್ಕು ಅಂಶಗಳು) 4 × ½ | 2 |
| 28. | ಸ್ವಾತಂತ್ರ್ಯಾನಂತರ ಭಾರತದಲ್ಲಿ ಭಾಷಾವಾರು ರಾಜ್ಯ ರಚನೆಯು ಅನಿವಾರ್ಯವಾಯಿತು. ಪುಷ್ಠೀಕರಿಸಿ.<br>***ಉತ್ತರ :***<br>∗ ಉತ್ತಮ ಆಡಳಿತ ಮತ್ತು ಭಾಷೆಯನ್ನು ಆಧರಿಸಿದ ಭೌಗೋಳಿಕ ಗಡಿಯನ್ನು ಗುರುತಿಸಲು ಒತ್ತಾಯ.<br>∗ ಜನರು ಆಡುವ ಭಾಷೆಯಲ್ಲಿ ಆಡಳಿತ ನಡೆಸುತ್ತಿರಲಿಲ್ಲ.<br>1 + 1 | 2 |
| 29. | ಜರ್ಮನಿಯ ಅವನತಿಗೆ ಹಿಟ್ಲರ್ ಹೇಗೆ ಕಾರಣನಾದನು ?<br>***ಉತ್ತರ :***<br>∗ ನಾಜಿವಾದವನ್ನು ಅನುಸರಿಸಿದನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ∗ ಜಗತ್ತನ್ನು ಆಳಲು ಜರ್ಮನ್‌ರು ಮಾತ್ರ ಯೋಗ್ಯರು<br>∗ ಜರ್ಮನಿಯ ಸಮಸ್ಯೆಗಳಿಗೆ ಯಹೂದಿಗಳೇ ಕಾರಣ<br>∗ ಉಗ್ರ ರಾಷ್ಟ್ರೀಯವಾದ ಜಾರಿಗೆ ತಂದುದು<br>∗ ಗೋಬೆಲ್ಸ ನೇಮಕ<br>∗ ಬೂದು ಅಂಗಿದಳದ ಸ್ಥಾಪನೆ<br>∗ ಸಾಮೂಹಿಕ ಕೊಲೆ, ನರಮೇಧ ಜರುಗಿದವು<br>∗ ಹೋಲೊಕಾಷ್ಟ ಜರುಗಿತು<br>∗ ಸಾಮೂಹಿಕ ಕೊಲೆ<br>(ಯಾವುದಾದರೂ ನಾಲ್ಕು ಅಂಶಗಳು) 4 × ½ | 2 |
| 30. | ಭಾರತ ಶಾಂತಿ ಪ್ರಿಯ ರಾಷ್ಟ್ರವಾಗಿದ್ದು ಪರಿಮಿತಿಯಲ್ಲಿನ ನಿಶ್ಶಸ್ತ್ರೀಕರಣವನ್ನು ಪ್ರತಿಪಾದಿಸುತ್ತಿದೆ. ಏಕೆ ?<br>***ಉತ್ತರ :***<br>∗ ಸಂಪೂರ್ಣ ನಶಸ್ತ್ರೀಕರಣ ಸಾಧ್ಯವಾಗದ ವಿಚಾರ.<br>∗ ಪ್ರತಿಯೊಂದು ರಾಷ್ಟ್ರಕ್ಕೂ ತನ್ನದೇ ಆದ ರಕ್ಷಣಾತ್ಮಕ ವ್ಯೂಹ ಅತ್ಯಗತ್ಯ.<br>1 + 1 | 2 |
| 31. | ಯಾವ ಅಂಶಗಳು ಮಾನವ ಹಕ್ಕುಗಳ ಹೋರಾಟಕ್ಕೆ ಸ್ಫೂರ್ತಿಯಾದವು ?<br>***ಉತ್ತರ :***<br>∗ 1776 ರ ಅಮೆರಿಕಾ ಸ್ವಾತಂತ್ರ್ಯ ಯುದ್ಧ<br>∗ 1789 ರ ಫ್ರಾನ್ಸ್ ಮಹಾಕ್ರಾಂತಿ<br>∗ ಭಾರತದ ಸ್ವಾತಂತ್ರ್ಯ ಹೋರಾಟ<br>1 + 1 | 2 |
| 32. | ಹಸಿವಿನ ಸೂಚಕವನ್ನು ಹೇಗೆ ಕಂಡಹಿಡಿಯಬಹುದು ?<br>***ಉತ್ತರ :***<br>∗ ಕನಿಷ್ಠ ಕ್ಯಾಲೋರಿ ದೊರಕದ ಆಹಾರ ಸೇವಿಸುವವರ ಶೇಕಡಾವಾರು ಪ್ರಮಾಣ.<br>∗ ಸರಾಸರಿ ತೂಕಕ್ಕಿಂತ ಕಡಿಮೆ ತೂಕವಿರುವ ಐದು ವರ್ಷದ ಒಳಗಿನ ಮಕ್ಕಳ ಶೇಕಡಾವಾರು ಪ್ರಮಾಣ.<br>∗ ಐದು ವರ್ಷದವರೆಗಿನ ಮಕ್ಕಳ ಮರಣದ ಶೇಕಡಾವಾರು ಪ್ರಮಾಣ, ಇವುಗಳನ್ನು ಕೂಡಿಸಿ 3 ರಿಂದ ಭಾಗಿಸಿದಾಗ ಹಸಿವಿನ ಸೂಚಕ ಬರುವುದು.<br>(ಯಾವುದಾದರೂ ಎರಡು ಅಂಶಗಳು) 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 33. | "ಭಾರತದ ವಾಯುಗುಣವು ಪ್ರದೇಶದಿಂದ ಪ್ರದೇಶಕ್ಕೆ ಕಾಲದಿಂದ ಕಾಲಕ್ಕೆ ಬದಲಾಗುತ್ತದೆ." ಈ ಹೇಳಿಕೆಯನ್ನು ಸಮರ್ಥಿಸಿ.<br>*ಉತ್ತರ :*<br>* ಭಾರತದ ಸ್ಥಾನ<br>* ಜಲರಾಶಿಗಳು<br>* ಮೇಲ್ಮೈ ಲಕ್ಷಣ<br>* ಮಾನ್ಸೂನ್ ಮಾರುತಗಳು 4 × ½ | 2 |
| 34. | ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಜಲಸಂಪನ್ಮೂಲವು ಹೇಗೆ ಬಹುಮುಖ್ಯ ಸಂಪನ್ಮೂಲವಾಗಿದೆ ?<br>*ಉತ್ತರ :*<br>* ಕುಡಿಯಲು<br>* ಅಡುಗೆಗಾಗಿ<br>* ವ್ಯವಸಾಯಕ್ಕಾಗಿ<br>* ವಿದ್ಯುತ್ ಉತ್ಪಾದನೆ<br>* ಸ್ವಚ್ಛತೆಗೆ<br>* ಕೈಗಾರಿಕೆ<br>* ನೌಕಾಯಾನ<br>* ಮೀನುಗಾರಿಕೆ ಬಳಕೆ<br>(ಯಾವುದಾದರೂ ನಾಲ್ಕು ಅಂಶಗಳು) 4 × ½ | 2 |
| 35. | ದೂರಸಂವೇದಿ ತಂತ್ರಜ್ಞಾನವು ಯಾವ ರೀತಿ ಅನುಕೂಲವಾಗಿದೆ ?<br>*ಉತ್ತರ :*<br>* ಪೃಥ್ವಿಯ ಮೇಲಿನ ಮಾಹಿತಿಗಳನ್ನು ಸಂವೇದನೆಯ ಮೂಲಕ ಸಂಗ್ರಹಿಸುವುವು.<br>* ಒಂದು ವಸ್ತು, ಸ್ಥಳಗಳ ನೇರ ಸಂಪರ್ಕ ಹೊಂದದೆ ಮಾಹಿತಿಗಳನ್ನು ಸಂಗ್ರಹಿಸುವುದು.<br>* ಬಾಹ್ಯ, ಉಪಗ್ರಹ ಚಿತ್ರ, ಛಾಯಾಚಿತ್ರಗಳನ್ನು ಪಡೆಯಬಹುದು.<br>(ಯಾವುದಾದರೂ ಎರಡು ಅಂಶಗಳು) 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 36. | ಜನಸಂಖ್ಯೆಯ ಬೆಳವಣಿಗೆಗೆ ಕಡಿಮೆ ಮರಣದರವು ಯಾವ ರೀತಿ ಕಾರಣವಾಗಿದೆ ? | |
| | ***ಉತ್ತರ :*** | |
| | * ವೈದ್ಯಕೀಯ ಸೌಲಭ್ಯಗಳ ಸುಧಾರಣೆ | |
| | * ಸಾಂಕ್ರಾಮಿಕ ರೋಗಗಳ ನಿಯಂತ್ರಣ | |
| | * ಶಿಶು ಮರಣದ ಕುಸಿತ | |
| | * ಶಿಕ್ಷಣದ ಪ್ರಗತಿ $4 \times \frac{1}{2}$ | 2 |
| 37. | ಶೀಘ್ರ ಆಹಾರ ಸರಪಳಿಗಳು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ರೋಗರುಜಿನಗಳಿಗೆ ಹೇಗೆ ಎಡೆಮಾಡಿಕೊಡುತ್ತವೆ ಎಂಬುದನ್ನು ವಿವರಿಸಿ. | |
| | ***ಉತ್ತರ :*** | |
| | * ಪ್ರಯೋಜನಕಾರಿಯಲ್ಲದ ಆಹಾರ ಸೇವನೆ | |
| | * ಜನರ ಆರೋಗ್ಯದ ಅವನತಿ | |
| | * ಸಾಂಪ್ರದಾಯಿಕ ಆಹಾರಗಳ ನಿರ್ಮೂಲನ 1 + 1 | 2 |
| 38. | ಮಹಿಳಾ ಸಬಲೀಕರಣವನ್ನು ಹೇಗೆ ಸಾಧಿಸಬಹುದು ? | |
| | ***ಉತ್ತರ :*** | |
| | * ಹಿಂಸೆಯ ನಿರ್ಮೂಲನಕ್ಕೆ ಕಾನೂನುಗಳು ಜಾರಿ | |
| | * ಸಮಾನವೇತನ | |
| | * ಚುನಾಯಿತ ಸಂಸ್ಥೆಗಳಲ್ಲಿ ಮೀಸಲಾತಿ 1 + 1 | 2 |
| 39. | ಪುಷ್ಪ ಕೃಷಿಯು ಭಾರತೀಯ ರೈತರ ಅಭಿವೃದ್ಧಿಗೆ ಹೇಗೆ ಸಹಾಯಕವಾಗಿದೆ ? | |
| | ***ಉತ್ತರ :*** | |
| | * ರೈತರ ಆದಾಯ ಹೆಚ್ಚಳ | |
| | * ಉದ್ಯೋಗಾವಕಾಶಗಳು | |
| | * ಮಹಿಳಾ ವೃತ್ತಿಗೆ ಅನುಕೂಲ | |
| | * ರಫ್ತು ವ್ಯಾಪಾರಕ್ಕೆ ಉತ್ತೇಜನ $4 \times \frac{1}{2}$ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | | ಅಂಕಗಳು |
|---|---|---|---|
| 40. | ದ್ವಿಪ್ರಭುತ್ವ ಪದ್ಧತಿಯ ಲಕ್ಷಣಗಳನ್ನು ತಿಳಿಸಿ.<br>*ಉತ್ತರ :*<br>* ಬ್ರಿಟಿಷರು ಭೂಕಂದಾಯವನ್ನು (ದಿವಾನಿ) ವಸೂಲಿ ಮಾಡುವುದು.<br>* ನವಾಬ ಆಡಳಿತ, ನ್ಯಾಯ, ಆಡಳಿತಾತ್ಮಕ ಕಾರ್ಯ ನಿರ್ವಹಣೆ. | 1 + 1 | 2 |
| 41. | ಸಹಾಯಕ ಸೇನಾ ಪದ್ಧತಿಯ ಕರಾರುಗಳನ್ನು ತಿಳಿಸಿ.<br>*ಉತ್ತರ :*<br>* ಭಾರತೀಯ ರಾಜರಲ್ಲಿ ಬ್ರಿಟಿಷ್ ಸೈನ್ಯ ತುಕಡಿ ಇಡುವುದು.<br>* ಸೇನೆಯ ವೇತನ, ನಿರ್ವಹಣೆ ರಾಜನು ನಿರ್ವಹಿಸುವುದು.<br>* ಒಪ್ಪಿಗೆಯಿಂದ ಯುರೋಪಿಯನ್ನರ ನೇಮಕ ಮಾಡುವುದು.<br>* ಯುದ್ಧ, ಒಪ್ಪಂದಗಳನ್ನು ಮಾಡುವಂತಿಲ್ಲ.<br>* ಕಂಪನಿಯು ರಾಜ್ಯಕ್ಕೆ ಆಂತರಿಕ, ಬಾಹ್ಯ ರಕ್ಷಣೆ ಕೊಡುವುದು (ನೀಡುವುದು).<br>(ಯಾವುದಾದರೂ ಎರಡು ಅಂಶಗಳು) | 1 + 1 | 2 |
| 42. | ಲಿಂಗ ತಾರತಮ್ಯದ ಪ್ರಕಾರಗಳು ಯಾವುವು ?<br>*ಉತ್ತರ :*<br>* ಜನನ ಪ್ರಮಾಣದಲ್ಲಿ ಅಸಮಾನತೆ<br>* ಮೂಲಸೌಕರ್ಯದಲ್ಲಿ ಅಸಮಾನತೆ<br>* ಅವಕಾಶಗಳಲ್ಲಿ ಅಸಮಾನತೆ<br>* ಒಡೆತನದಲ್ಲಿ ಅಸಮಾನತೆ<br>* ಕೌಟುಂಬಿಕ ಅಸಮಾನತೆ<br>(ಯಾವುದಾದರೂ ಎರಡು ಅಂಶಗಳು) | 1 + 1 | 2 |
| 43. | ಮಣ್ಣಿನ ಸವೆತದ ಪರಿಣಾಮಗಳೇನು ?<br>*ಉತ್ತರ :*<br>* ಮಣ್ಣಿನ ಸಾರ ಕಡಿಮೆ | | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ಉತ್ಪಾದನಾ ಸಾಮರ್ಥ್ಯದ ಕೊರತೆ | |
| | * ಜಲಾಶಯಗಳಲ್ಲಿ ನೀರಿನ ಸಂಗ್ರಹಣ ಕಡಿಮೆ | |
| | * ಮಣ್ಣಿನಲ್ಲಿ ತೇವಾಂಶ ಕಡಿಮೆ | |
| | * ಅಂತರ್ಜಲದ ಮಟ್ಟ ಕಡಿಮೆ | |
| | * ಬರ ಪರಿಸ್ಥಿತಿ | |
| | (ಯಾವುದಾದರೂ ಎರಡು ಅಂಶಗಳು) 1 + 1 | 2 |
| 44. | ಭಾರತದಲ್ಲಿ ನೀರಾವರಿಯು ಅತ್ಯಗತ್ಯವಾಗಿದೆ. ಏಕೆ ? | |
| | ***ಉತ್ತರ :*** | |
| | * ಕೃಷಿ ಪ್ರಧಾನ ರಾಷ್ಟ್ರ | |
| | * ಮಾನ್ಸೂನ್ ಮಳೆಯ ಅವಲಂಬನೆ | |
| | * ಅಸಮರ್ಪಕ ಮಳೆಯ ಹಂಚಿಕೆ | |
| | * ಅಕಾಲಿಕ ಮಳೆ 4 × ½ | 2 |
| 45. | ಉತ್ತರ ಭಾರತದ ಮೈದಾನದ ಪ್ರಾಮುಖ್ಯತೆ ತಿಳಿಸಿ. | |
| | ***ಉತ್ತರ :*** | |
| | * ಫಲವತ್ತಾದ ಮಣ್ಣು | |
| | * ಸರ್ವಕಾಲಿಕ ಹರಿಯುವ ನದಿಗಳು | |
| | * ಕೃಷಿಗೆ ಉಪಯುಕ್ತ | |
| | * ರಸ್ತೆಗಳ ನಿರ್ಮಾಣಕ್ಕೆ ಅನುಕೂಲ | |
| | * ನಗರೀಕರಣ, ವ್ಯಾಪಾರಕ್ಕೆ ಅನುಕೂಲ 4 × ½ | 2 |
| 46. | ನಮಗೆ ಅಂಚೆ ಕಚೇರಿಗಳು ಯಾವ ಸೇವೆಗಳನ್ನು ಸಲ್ಲಿಸುತ್ತವೆ ? | |
| | ***ಉತ್ತರ :*** | |
| | * ಪತ್ರಗಳು, ಪಾರ್ಸಲ್‌ಗಳ ರವಾನೆ | |
| | * ಸಣ್ಣ ಉಳಿತಾಯ, ಠೇವಣಿಗಳು | |
| | * ಮನಿಯಾರ್ಡರ್ ಸೇವೆ | |
| | * ರಾಷ್ಟ್ರೀಯ ಉಳಿತಾಯ ಪತ್ರಗಳ ವಿತರಣೆ 4 × ½ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 47. | ಪ್ರತ್ಯಕ್ಷ ಹಾಗೂ ಪರೋಕ್ಷ ತೆರಿಗೆಗಳಿಗೆ ಪ್ರತಿಯೊಂದಕ್ಕೂ ಎರಡು ಉದಾಹರಣೆ. ತಿಳಿಸಿ.<br>***ಉತ್ತರ :***<br>* *ಪ್ರತ್ಯಕ್ಷ ತೆರಿಗೆಗಳು :*<br>  * ವರಮಾನ ತೆರಿಗೆ<br>  * ಕಂಪನಿ ತೆರಿಗೆ<br>  * ಸಂಪತ್ತಿನ ತೆರಿಗೆ<br>  * ಸ್ಟಾಂಪ್ ಶುಲ್ಕ<br>* *ಪರೋಕ್ಷ ತೆರಿಗೆಗಳು :*<br>  * ಸರಕು–ಸೇವೆಗಳ ಮೇಲಿನ ತೆರಿಗೆ<br>  * ಅಬಕಾರಿ ತೆರಿಗೆ<br>  * ಮೌಲ್ಯವರ್ಧಿತ ತೆರಿಗೆ<br>  * ಆಮದು–ರಫ್ತು ತೆರಿಗೆ<br>  * ಸೇವಾ ತೆರಿಗೆಗಳು<br>(ಯಾವುದಾದರೂ ಎರಡೆರಡು ಅಂಶಗಳು) | 2 |
| 48. | ಜಾಗತೀಕರಣವು ದೇಶದ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಹೇಗೆ ?<br>***ಉತ್ತರ :***<br>* ವಿಶಾಲವಾದ ಕ್ಷೇತ್ರ, ಉತ್ಪಾದನೆ ಮತ್ತು ಸೇವೆಗಳು ದೊರೆಯುತ್ತವೆ<br>* ಜೀವನಮಟ್ಟ ಸುಧಾರಣೆ<br>* ರಾಷ್ಟ್ರೀಯ ವರಮಾನ ಹೆಚ್ಚಳ<br>* ತಲಾ ವರಮಾನ ಹೆಚ್ಚಳ<br>(ಯಾವುದಾದರೂ ಎರಡು ಅಂಶಗಳು) 1 + 1 | 2 |
| 49. | ಆರ್ಯ ಸಮಾಜದ ಉದ್ದೇಶಗಳು ಯಾವುವು ?<br>***ಉತ್ತರ :***<br>* ಎಲ್ಲಾ ಹಿಂದೂಗಳು ರೂಪವಿಲ್ಲದ ಒಬ್ಬನೇ ದೇವರಲ್ಲಿ ನಂಬಿಕೆಯಿಡುವುದು<br>* ಹುಟ್ಟಿನಿಂದ ಯಾರೂ ಶೂದ್ರರಲ್ಲ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ಅಂತಾರಾಷ್ಟ್ರೀಯ ವಿವಾಹಗಳಿಗೆ ಪ್ರೋತ್ಸಾಹ<br>* ಬಹುಪತ್ನಿತ್ವ – ಬಾಲ್ಯವಿವಾಹ ನಿಷೇಧ<br>* ಸ್ತ್ರೀ ಪುರುಷರು ಸಮಾನರು<br>* ವೇದಗಳನ್ನು ಅಧ್ಯಯನ ಮಾಡುವುದು<br>(ಯಾವುದಾದರೂ ಎರಡು ಅಂಶಗಳು) 1 + 1 | 2 |
| IV. | **ಆರು ವಾಕ್ಯಗಳಲ್ಲಿ ಉತ್ತರಿಸುವುದು :** 6 × 3 = 18 | |
| 50. | ಬ್ರಿಟಿಷರ ಭೂಕಂದಾಯ ಪದ್ಧತಿಯು ಭಾರತೀಯ ರೈತರ ಮೇಲೆ ಹೇಗೆ ಪರಿಣಾಮ ಬೀರಿತು ?<br>***ಅಥವಾ***<br>ಆಂಗ್ಲರ ವಿರುದ್ಧ ಕಿತ್ತೂರಿನಲ್ಲಾದ ದಂಗೆಯನ್ನು ವಿವರಿಸಿ.<br>***ಉತ್ತರ :***<br>* ರೈತರನ್ನು ಶೋಷಿಸುವ ಹೊಸ ಸಾಮಾಜಿಕ ವರ್ಗ, ಜಮೀನುದಾರಿ ಸಮುದಾಯ ಹುಟ್ಟಿತು.<br>* ರೈತರು ಸಂಕಷ್ಟಕ್ಕೆ ಒಳಗಾದುದು<br>* ನಿರ್ಗತಿಕರಾದುದು<br>* ಭೂಮಿಯ ಮಾರಾಟ, ಪರಭಾರೆ ಮಾಡಿ ಸಾಲ ಪಡೆಯಬಹುದಿತ್ತು.<br>* ಜಮೀನುದಾರರು ಕಂದಾಯಕ್ಕಾಗಿ ಜಮೀನನ್ನು ಮಾರಿದರು.<br>* ವಾಣಿಜ್ಯ ಕೃಷಿಯ ಪ್ರಾರಂಭ, ಕೈಗಾರಿಕೆಗೆ ಬೇಕಾಗಿರುವ ಕಚ್ಚಾ ಸಾಮಗ್ರಿಗಳನ್ನು ಬೆಳೆಯಬೇಕಾಯಿತು.<br>* ಲೇವಾದೇವಿದಾರರು ಬಲಿಷ್ಠರಾದರು.<br>(ಯಾವುದಾದರೂ ಆರು ಅಂಶಗಳು) 6 × ½ | 3 |
| | ***ಅಥವಾ***<br>* ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿ ಕಿತ್ತೂರಿಗೆ ಅಳವಡಿಸಿತು.<br>* ಬ್ರಿಟಿಷರು ಕಿತ್ತೂರಿನ ಆಡಳಿತವನ್ನು ಕಿತ್ತುಕೊಳ್ಳುವ ಪ್ರಯತ್ನ ಮಾಡಿದರು.<br>* ಬ್ರಿಟಿಷರು ಕಿತ್ತೂರಿನ ಕೋಟೆ, ಖಜಾನೆಗಳನ್ನು ವಶಕ್ಕೆ ಪಡೆದುದು.<br>* ಚೆನ್ನಮ್ಮಳಿಗೆ ಯುದ್ಧ ಅನಿವಾರ್ಯವಾಯಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ಥ್ಯಾಕರೆ ಬಲಿಯಾದನು.<br>* ಕಿತ್ತೂರಿನ ಸೈನಿಕರು ಕರ್ನಲ್ ಡೀಕ್ ನೇತೃತ್ವದ ಸೈನ್ಯದೊಂದಿಗೆ ವೀರಾವೇಶದಿಂದ ಹೋರಾಡಿದರು.<br>* ಚೆನ್ನಮ್ಮನ ಸೆರೆ, ಕಿತ್ತೂರಿನ ವಶ.<br>(ಯಾವುದಾದರೂ ಆರು ಅಂಶಗಳು) 6 × ½ | 3 |
| 51. | ಬಡತನದ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳೇನು ?<br>***ಅಥವಾ***<br>ವಿಶ್ವಸಂಸ್ಥೆಯ ಸಾಧನೆಗಳೇನು ?<br>***ಉತ್ತರ :***<br>* ಉದ್ಯೋಗ ಸೃಷ್ಟಿಸುವ ಕಾರ್ಯಕ್ರಮಗಳು ಜಾರಿ<br>* ಕೌಶಲ್ಯ ಆಧಾರಿತ ಗುಣಮಟ್ಟದ ಶಿಕ್ಷಣ<br>* ಮೂಲಭೂತ ಬಂಡವಾಳ, ಸಾಲ ರೂಪದಲ್ಲಿ ನೀಡುವುದು<br>* ಸಹಾಯಧನ<br>* ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹ<br>* ಕರಕುಶಲ ಕಸುಬುಗಳಿಗೆ ಆದ್ಯತೆ 6 × ½ | 3 |
| | ***ಅಥವಾ***<br>* *ಶಾಂತಿ ಸ್ಥಾಪನೆಯ ಕಾರ್ಯಗಳು :*<br>  * ರಾಜಕೀಯ ಸಂಘರ್ಷಗಳ ನಿವಾರಣೆ<br>  * ಸೂಯೇಜ್ ಕಾಲುವೆ ಬಿಕ್ಕಟ್ಟು<br>  * ಇರಾನ್ ಸಂಘರ್ಷ, ಇಂಡೋನೇಷ್ಯಾ, ಪ್ಯಾಲೆಸ್ಟೈನ್, ಕಾಶ್ಮೀರ, ಕೊರಿಯಾ, ಹಂಗೇರಿ ಸಮಸ್ಯೆಗಳಿಗೆ ಪರಿಹಾರ<br>  * ನಿಶ್ಶಸ್ತ್ರೀಕರಣದ ಪ್ರಯತ್ನ<br>* *ಆರ್ಥಿಕ ಸಾಧನೆಗಳು :*<br>  * ಸಾಮಾಜಿಕ ಪ್ರಗತಿ, ಉತ್ತಮ ಜೀವನಮಟ್ಟಕ್ಕೆ ವಿಶ್ವಸಂಸೆಯ ಘೋಷಣೆ<br>  * ಸುಂಕ ಹಾಗೂ ಹಣಕಾಸು ಒಪ್ಪಂದಗಳು<br>* *ಸಾಮಾಜಿಕ ಸಾಧನೆಗಳು :*<br>  * UNESCO, WHO, UNICEF ಸ್ಥಾಪನೆ<br>  * ವಿಶ್ವ ನಿರಾಶ್ರಿತರ ಆಯೋಗ<br>  * ಮಾನವ ಹಕ್ಕುಗಳ ಉದ್ಘೋಷಣೆ<br>(ಯಾವುದಾದರೂ ಆರು ಅಂಶಗಳು) 6 × ½ | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 52. | ಅಸ್ಪೃಶ್ಯತಾ ತಡೆಗೆ ಸಂವಿಧಾನಾತ್ಮಕ ಕ್ರಮಗಳನ್ನು ತಿಳಿಸಿ.<br>***ಅಥವಾ***<br>ಅಸಂಘಟಿತ ದುಡಿಮೆದಾರರು ಎದುರಿಸುತ್ತಿರುವ ಸವಾಲುಗಳು ಯಾವುವು ?<br>***ಉತ್ತರ :***<br>* 17ನೇ ವಿಧಿ ಅಸ್ಪೃಶ್ಯತಾ ಆಚರಣೆ ನಿಷೇಧ<br>* 1955 ಭಾರತ ಸರ್ಕಾರ ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ ಜಾರಿಗೆ<br>* 1976 ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ<br>* ಅಸ್ಪೃಶ್ಯತಾ ಆಚರಣೆ ಶಿಕ್ಷಾರ್ಹ ಅಪರಾಧ<br>* ಸಮಾನತೆ, ಸರ್ವರಿಗೂ ಮತದಾನದ ಹಕ್ಕು<br>* ಶೈಕ್ಷಣಿಕ ಹಾಗೂ ಉದ್ಯೋಗಕ್ಕೆ ಮೀಸಲಾತಿ<br>* 1989 ರಾಜ್ಯ ಸರ್ಕಾರಕ್ಕೆ ವಿಶೇಷ ಅಧಿಕಾರ<br>* ಆಸಕ್ತಿ<br>(ಯಾವುದಾದರೂ ಆರು ಅಂಶಗಳು) 6 × ½ | 3 |
| | ***ಅಥವಾ***<br>* ವಲಸೆ<br>* ಸಾಮಾಜಿಕ ಅಭದ್ರತೆ<br>* ಕಾನೂನುಗಳಿಲ್ಲ<br>* ಬಾಲಕಾರ್ಮಿಕರ ದುಡಿತ<br>* ದೈಹಿಕ–ಮಾನಸಿಕ ದೌರ್ಜನ್ಯಗಳು<br>* ಮಕ್ಕಳು, ಹೆಣ್ಣುಮಕ್ಕಳಿಗೆ ಕಿರುಕುಳ 6 × ½ | 3 |
| 53. | ಕಬ್ಬಿಣ ಮತ್ತು ಉಕ್ಕು ಕೈಗಾರಿಕೆಯ ಸ್ಥಾನೀಕರಣಕ್ಕೆ ಬೇಕಾದ ಅಂಶಗಳು ಯಾವುವು ?<br>***ಅಥವಾ***<br>ಪ್ರವಾಹಗಳು ಉಂಟಾಗಲು ಯಾವುದಾದರೂ ಆರು ಅಂಶಗಳನ್ನು ತಿಳಿಸಿ.<br>***ಉತ್ತರ :***<br>* ಕಬ್ಬಿಣದ ಅದಿರು ಪೂರೈಕೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ಕಲ್ಲಿದ್ದಲು, ಜಲವಿದ್ಯುತ್ ಪೂರೈಕೆ | |
| | * ರೈಲು, ಬಂದರು, ಸೌಲಭ್ಯ | |
| | * ನೀರು ಪೂರೈಕೆ | |
| | * ಕಡಿಮೆ ಕೂಲಿ, ನುರಿತ ಕಾರ್ಮಿಕರು | |
| | * ಬಂಡವಾಳ, ಸ್ಥಳೀಯ ಮಾರುಕಟ್ಟೆ | |
| | (ಯಾವುದಾದರೂ ಆರು ಅಂಶಗಳು) $6 \times \frac{1}{2}$ | 3 |
| | ***ಅಥವಾ*** | |
| | * ನೈಸರ್ಗಿಕ ಹಾಗೂ ಮಾನವನ ಕೃತ್ಯಗಳಿಂದ | |
| | * ಅತ್ಯಧಿಕ ಮಳೆ | |
| | * ಹಿಮ ಕರಗುವಿಕೆ | |
| | * ಆವರ್ತ ಮಾರುತ | |
| | * ಮೇಘ ಸ್ಫೋಟ | |
| | * ನದಿ ಪಾತ್ರಗಳಲ್ಲಿ ಹೂಳು ತುಂಬುವಿಕೆ | |
| | * ಅರಣ್ಯ ನಾಶ | |
| | * ಅವೈಜ್ಞಾನಿಕ ನೀರಾವರಿ, ಕೃಷಿ ವ್ಯವಸ್ಥೆ | |
| | * ನಗರೀಕರಣ | |
| | (ಯಾವುದಾದರೂ ಆರು ಅಂಶಗಳು) $6 \times \frac{1}{2}$ | 3 |
| 54. | ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಯಾವ ಕಾರ್ಯಗಳ ಮೂಲಕ ದೇಶದ ಹಿತಕ್ಕಾಗಿ ಶ್ರಮಿಸುತ್ತಿದೆ ? | |
| | ***ಅಥವಾ*** | |
| | ಸರ್ಕಾರವು ತೆರಿಗೆಗಳನ್ನು ಹೊರತುಪಡಿಸಿ ತನ್ನ ವರಮಾನವನ್ನು ಹೇಗೆ ಸಂಗ್ರಹಿಸುತ್ತಿದೆ ? | |
| | ***ಉತ್ತರ :*** | |
| | * ನೋಟು ಚಲಾವಣೆ | |
| | * ಸರ್ಕಾರದ ಬ್ಯಾಂಕು ಆಗಿ ಕಾರ್ಯ ನಿರ್ವಹಣೆ | |
| | * ಬ್ಯಾಂಕುಗಳ ಬ್ಯಾಂಕು | |
| | * ರಾಷ್ಟ್ರೀಯ ಸಂದಾಯ ಕೇಂದ್ರವಾಗಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ಸಾಲ ಪ್ರಮಾಣದ ನಿಯಂತ್ರಕನಾಗಿ<br>* ವಿದೇಶಿ ವಿನಿಮಯದ ಸಂಗ್ರಹಕನಾಗಿ<br>* ಬ್ಯಾಂಕ್ ಹವ್ಯಾಸದ ಅಭಿವೃದ್ಧಿ<br>(ಯಾವುದಾದರೂ ಆರು ಅಂಶಗಳು) 6 × ½ | 3 |
| | ***ಅಥವಾ*** | |
| | * ಭಾರತೀಯ ರಿಸರ್ವ್ ಬ್ಯಾಂಕ್ ಗಳಿಸುವ ಲಾಭ<br>* ಭಾರತೀಯ ರೈಲ್ವೆ ಗಳಿಸುವ ಲಾಭ<br>* ಅಂಚೆ–ದೂರವಾಣಿಗಳಿಂದ ಬರುವ ವರಮಾನ<br>* ಸಾರ್ವಜನಿಕ ಉದ್ದಿಮೆಗಳಿಂದ ಬರುವ ವರಮಾನ<br>* ನಾಣ್ಯ, ಮುದ್ರಣಾಲಯಗಳಿಂದ ಬರುವ ವರಮಾನ<br>* ಶುಲ್ಕಗಳು, ದಂಡಗಳು 6 × ½ | 3 |
| 55. | ಉಳಿತಾಯ ಖಾತೆಗೂ ಚಾಲ್ತಿ ಖಾತೆಗೂ ಇರುವ ವ್ಯತ್ಯಾಸಗಳನ್ನು ತಿಳಿಸಿ.<br>***ಅಥವಾ***<br>ಉದ್ದಿಮೆದಾರರಾದ ಏಕ್ತಾ ಕಪೂರ್ ಮತ್ತು ಕಿರಣ್ ಮುಜಮ್‌ದಾರ್ ಷಾರವರ ಸಾಧನೆಗಳೇನು ?<br>***ಉತ್ತರ :*** | |
| | ***ಉಳಿತಾಯ ಖಾತೆ*** — ***ಚಾಲ್ತಿ ಖಾತೆ*** | |
| | * ನಿಗದಿತ ಆದಾಯ, ವೇತನದಾರರು ಖಾತೆ ತೆರೆಯಬಹುದು — * ಹೆಚ್ಚಿನ ಬ್ಯಾಂಕು ವಹಿವಾಟುದಾರರು, ವ್ಯಾಪಾರಸ್ತರು, ವಾಣಿಜ್ಯ ಉದ್ಯೋಗ ಸಂಸ್ಥೆಯವರು ಖಾತೆ ಹೊಂದಬಹುದು. | |
| | * ಹಿರಿಯ ನಾಗರಿಕರು, ಪಿಂಚಣಿದಾರರು ಹೊಂದಬಹುದು. — * ದಿನಕ್ಕೆ ಎಷ್ಟು ಬಾರಿಯಾದರೂ ಹಣ ತುಂಬಿ, ಹಿಂಪಡೆಯಬಹುದು. | |
| | * ಹಣ ಉಳಿತಾಯ — * ಠೇವಣಿ ಮರುಪಾವತಿ ಹಿಂದಕ್ಕೆ ಪಡೆಯಲು ಅನುಕೂಲ | |
| | * ಪರಿಮಿತಿ ಇಲ್ಲ<br>* ಬಡ್ಡಿ ಕೊಡುವುದು<br>* ಚೆಕ್ಕು, ಚೀಟಿಗಳ ಮೂಲಕ ಹಣ ಹಿಂದಕ್ಕೆ ಪಡೆಯಬಹುದು.<br>(ಯಾವುದಾದರೂ 3 ಅಂಶಗಳು ಪ್ರತಿಯೊಂದರಿಂದ) 6 × ½ | 3 |
| | ***ಅಥವಾ*** | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|

| *ಏಕ್ತಾ ಕಪೂರ್* | *ಕಿರಣ್ ಮುಜಮ್‌ದಾರ್ ಷಾ* |
|---|---|
| * ದೂರದರ್ಶನ ಕ್ಷೇತ್ರದಲ್ಲಿ ಆಧಿಪತ್ಯ ಸಾಧಿಸಿದ ರಾಣಿ | * ಬಯೋಕಾನ್ ನಿಗಮದ ಅಧ್ಯಕ್ಷರು |
| * ಬಾಲಾಜಿ ದೂರದರ್ಶನ ಚಿತ್ರ ನಿರ್ಮಾಣ | * ಬಯೋಕಾನ್ ಆಡಳಿತ ನಿರ್ದೇಶಕರು |
| * 2001 ರ ಶ್ರೇಷ್ಟ ಉದ್ಯಮಿ ಪ್ರಶಸ್ತಿ | * ಜೀವವಿಜ್ಞಾನ ಕ್ಷೇತ್ರದಲ್ಲಿ ಯಶಸ್ಸು ಕಂಡವರು. |
| * ದೂರದರ್ಶನ ಅನುಕ್ರಮ ಪ್ರಸಾರದ ರೂವಾರಿ | |

3

V. ***ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :*** $1 \times 4 = 4$


56. ಗಾಂಧೀಜಿಯವರು ಅಸಹಕಾರ ಚಳುವಳಿಯಲ್ಲಿ ಹಾಕಿಕೊಂಡಿದ್ದ ಕಾರ್ಯಕ್ರಮಗಳನ್ನು ವಿವರಿಸಿ.

***ಉತ್ತರ :***

* ಶಾಲಾ, ಕಾಲೇಜು, ನ್ಯಾಯಾಲಯಗಳ ಬಹಿಷ್ಕಾರ
* ಚುನಾವಣೆಗಳ (1919ರ) ಬಹಿಷ್ಕಾರ
* ಬ್ರಿಟಿಷರ ಗೌರವ, ಪದವಿ, ಸ್ಥಾನಗಳ ವಾಪಸ್ಸು
* ನಾಮನಿರ್ದೇಶನಗೊಂಡ ಸದಸ್ಯರ ರಾಜೀನಾಮ
* ಸರ್ಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸದೇ ಇರುವುದು
* ಕೈಮಗ್ಗ, ನೇಕಾರಿಕೆಯನ್ನು ಪ್ರೋತ್ಸಾಹಿಸುವುದು
* ಖಾದಿ ತಯಾರಿಕೆ
* ರಾಷ್ಟ್ರೀಯ ಶಾಲೆಗಳ ಸ್ಥಾಪನೆ
* ಭಾವೈಕ್ಯತೆ ತರುವುದು
* ಅಸ್ಪೃಶ್ಯತಾ ನಿವಾರಣೆ
* ಮಹಿಳಾ ಸಬಲೀಕರಣದ ಸಾಧನೆ

(ಯಾವುದಾದರೂ 8 ರಿಂದ 10 ಅಂಶಗಳು) $8 \times \frac{1}{2}$ 4

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VI. 57. | **ಭಾರತದ ನಕ್ಷೆಯನ್ನು ಬರೆದು, ಅದರಲ್ಲಿ ಈ ಕೆಳಗಿನವುಗಳನ್ನು ಗುರುತಿಸಿ :** 1 + 3 = 4 | |
| | a) ಕಾಂಡ್ಲಾ | |
| | b) ದಿಗ್ಬಾಯ್ | |
| | c) ಕನ್ಯಾಕುಮಾರಿ | |




***ದೃಷ್ಟಿ ವಿಕಲಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ : (ಪ್ರಶ್ನೆ ಸಂಖ್ಯೆ 57ರ ಬದಲಿಗೆ)***

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಪ್ರಮುಖ ಉದ್ದೇಶಗಳು ಯಾವುವು ?

* ನೀರಾವರಿ ಸೌಲಭ್ಯ
* ಪ್ರವಾಹಗಳ ನಿಯಂತ್ರಣ
* ಜಲವಿದ್ಯುತ್ ಉತ್ಪಾದನೆ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | * ಒಳನಾಡಿನ ನೌಕಾಯಾನ<br>* ಮಣ್ಣಿನ ಸವೆತ ನಿಯಂತ್ರಣ<br>* ಒಳನಾಡಿನ ಮೀನುಗಾರಿಕೆ<br>* ಮನರಂಜನೆ<br>* ಗೃಹ ಬಳಕೆಗೆ ನೀರು<br>* ಕೈಗಾರಿಕೆಗಳಿಗೆ ನೀರು<br>* ನಿರುಪಯುಕ್ತ ಭೂಮಿಯನ್ನು ಕೃಷಿಗಾಗಿ ಪರಿವರ್ತನೆ<br>* ಅರಣ್ಯ ಪೋಷಣೆ<br>(ಯಾವುದಾದರೂ ಎಂಟು) 8 × ½ | 4 |